**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ. ಸಂಖ್ಯೆ: 694/2012**

ಫ್ರಾಸಾ – 4

ಚಾಸಾ – 2

**ಸಾಕ್ಷಿಯು ದಿಃ 31.07.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಪ್ರಸಾದ್ ವಿ.ಕೆ. |
| ತಂದೆಯ ಹೆಸರು | : | ತಂಗಪ್ಪನ್ |
| ವಯಸ್ಸು | : | 49 ವರ್ಷ |
| ವೃತ್ತಿ | : | ಚಾಲಕ |
| ವಾಸಸ್ಥಳ | : | ಪಾಲತ್ತೈಲ್, ತಲಚೇರಿ ತಾಲ್ಲೂಕು, ಕಣ್ಣೂರು ಜಿಲ್ಲೆ, ಕೇರಳ ರಾಜ್ಯ |

**ದಂಡ ಪ್ರಕ್ರೀಯಾ ಸಂಹಿತೆ ಕಲಂ 299 ರ ರೀತ್ಯಾ ಮುಖ್ಯ ವಿಚಾರಣೆಃ**

**ಮಾನ್ಯ ಎಪಿಪಿಯವರಿಂದ :-**

ಚಾಸಾ 1 ಗೊತ್ತು. 7 ರಿಂದ 10ನೇ ಆರೋಪಿಗಳು ಗೊತ್ತು, ನೋಡಿದರೆ ಗುರುತಿಸುತ್ತೇನೆ. 2012ನೇ ಇಸವಿಯಲ್ಲಿ ಬೆಂಗಳೂರಿನಿಂದ ಮೈಸೂರು ಮಾರ್ಗವಾಗಿ ತಲಚೇರಿಗೆ ಚಾಸಾ 1 ರವರ ಬೊಲೆರೋ ವಾಹನ ಕೆಎಲ್ – 58–ಡಿ–8282 ದಲ್ಲಿ ಸಂಜೆ 4.30 ರ ಸಮಯದಲ್ಲಿ ಗುಂಡ್ಲುಪೇಟೆಗೆ 4 ಕಿ.ಮೀ ಹಿಂದೆ ರಸ್ತೆಯಲ್ಲಿ ಇನೋವಾ, ಸ್ಕಾರ್ಪಿಯೋ ಮತ್ತು ಮತ್ತೊಂದು ಕಾರನ್ನು ನಮ್ಮ ಕಾರನ್ನು ಸುತ್ತುವರೆದಿರುತ್ತಾರೆ, ಆಗ ಚಾಸಾ 1 ರವರ ಕಾರನ್ನು ನಾನು ಚಲಾಯಿಸುತ್ತಿದ್ದೆನು, ಆಗ ನಮ್ಮ ಕಾರಿನ ಗಾಜನ್ನು ಈ ಪ್ರಕರಣದ ಆರೋಪಿಗಳು ಮತ್ತು ಇತರ ಆರೋಪಿಗಳು 10 ಜನ ಇದ್ದು, ನನ್ನನ್ನು ಮತ್ತು

ಚಾಸಾ 1 ರವರನ್ನು ಕಾರಿನಿಂದ ಹೊರ ತಳ್ಳಿರುತ್ತಾರೆ ಮತ್ತು ಕಬ್ಬಿಣದ ರಾಡ್ ನಿಂದ ಹೊಡೆದಿರುತ್ತಾರೆ. ಆರೋಪಿಗಳು ಮತ್ತು ಇತರ ಆರೋಪಿಗಳು 25 ರಿಂದ 30 ವರ್ಷಗಳ ಒಳಗಿನವರಾಗಿದ್ದರು. ಆರೋಪಿಗಳು ನಮ್ಮನ್ನು ಆ ರೀತಿ ಮಾಡಿದ್ದರಿಂದ ನಾವು ಭಯಗೊಂಡು ಕಿರುಚಿಕೊಂಡು ಪಕ್ಕದ ಜಮೀನಿನೊಳಗೆ ಹೋಗಿರುತ್ತೇವೆ. ನಂತರ ಜಮೀನಿನಲ್ಲಿದ್ದ ಸ್ಥಳಿಯ ಜನರು ನನ್ನನ್ನು ಮತ್ತು ಚಾಸಾ 1 ರವರನ್ನು ಸಮಾಧಾನಪಡಿಸಿ ಕುಡಿಯಲು ನೀರು ಕೊಟ್ಟಿರುತ್ತಾರೆ. ಆರೋಪಿಗಳು ಕಬ್ಬಿಣದ ರಾಡ್ ನಿಂದ ಹೊಡೆದ ಕಾರಣ ನನ್ನ ಕಾಲಿಗೆ ರಕ್ತಗಾಯವಾಗಿರುತ್ತದೆ. ನಂತರ ನಾನು ಮತ್ತು ಚಾಸಾ 1 ರವರು ರಸ್ತೆಯಲ್ಲಿ ಹೋಗುತ್ತಿದ್ದ ಒಂದು ಲಾರಿಯನ್ನು ಹತ್ತಿಕೊಂಡು ಗುಂಡ್ಲುಪೇಟೆಗೆ ತಲುಪಿರುತ್ತೇವೆ ಆ ನಂತರ ಕಲ್ವೇಟಾದಲ್ಲಿರುವ ಚಾಸಾ 1 ರವರು ಅವರ ತಂಗಿಗೆ ಫೋನ್ ಮಾಡಿ ವಿಚಾರ ತಿಳಿಸಿರುತ್ತಾರೆ ಮತ್ತು ನಾನು ನನ್ನ ಸ್ನೇಹಿತರಿಗೆ ಫೋನ್ ಮಾಡಿ ವಿಚಾರ ತಿಳಿಸಿರುತ್ತೇನೆ. ಚಾಸಾ 1 ರವರು ಗುಂಡ್ಲುಪೇಟೆ ಪೊಲೀಸ್ ಠಾಣೆಗೆ ನಿಪಿ 9 ರಂತೆ ದೂರು ನೀಡಿರುತ್ತಾರೆ. ನಮ್ಮ ಬೊಲೇರೋ ವಾಹನವನ್ನು ಆರೋಪಿಗಳು ತೆಗೆದುಕೊಂಡು ಹೋಗಿದ್ದರು ಅದರ ಬೆಲೆ ರೂ.6 ಲಕ್ಷ ಬಾಳುತ್ತಿತ್ತು.

2. ನಂತರ ಪೊಲೀಸರು ಚಾಸಾ 1 ಮತ್ತು ನನ್ನನ್ನು ಗುಂಡ್ಲುಪೇಟೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಆ ದಿನವೇ ಬಂದಿರುತ್ತೇವೆ. ಮರು ದಿನ ನಾವು ನಮ್ಮ ಊರಿಗೆ ಹೋಗಿರುತ್ತೇವೆ. ಅದಾದ 3 ದಿನಗಳ ನಂತರ ಪೊಲೀಸರು ನಮ್ಮನ್ನು ಫೋನ್ ಮಾಡಿ ಕರೆದಿದ್ದು, ಅದರಂತೆ ನಾವು ಪೊಲೀಸ್ ಠಾಣಗೆ ಬಂದಿರುತ್ತೇನೆ, ಆಗ ಪೊಲೀಸರು 5 ಜನ ಆರೋಪಿಗಳನ್ನು ಮತ್ತು ಚಾಸಾ 1 ವಾಹನವನ್ನು ತೋರಿಸಿದ್ದು ನೋಡಲಾಗಿ ಚಾಸಾ 1 ವಾಹನದ ಸೀಟ್ ಮತ್ತು ಮ್ಯಾಟ್ ಹರಿದಿತ್ತು ಹಾಗೂ ಗ್ಲಾಸ್ ಹರಿದಿತ್ತು, ಆರೋಪಿಗಳನ್ನು ಮತ್ತು ವಾಹನವನ್ನು ಗುರುತಿಸಿ ನಾನು ಹೇಳಿಕೆ ನೀಡಿರುತ್ತೇನೆ. ಚಾಸಾ 1 ರವರ ವಾಹನವನ್ನು ಆರೋಪಿಗಳು ಬೇರೆ ದರೋಡೆಗಾಗಿ ಬಳಸಿದ್ದರು ಎಂದು ತಿಳಿದುಬಂದಿರುತ್ತದೆ. ಆ ದಿನ ರೈನೋ ವಾಹನವನ್ನು

ಸಹ ಪೊಲೀಸರು ತೋರಿದ್ದು ಅದನ್ನು ಸಹ ನೋಡಿರುತ್ತೇನೆ. ಘಟನಾ ದಿನ 2 ವಾಹನದಲ್ಲಿ ತಲಾ 5-5 ಜನ ಆರೋಪಿಗಳು ಬಂದಿದ್ದರು ಎಂದು ಚಾಸಾ 1 ರವರು ದೂರಿನಲ್ಲಿ ತಿಳಿಸಿದ್ದು, ಆದರೆ ರೈನೋ ವಾಹನದಲ್ಲಿ 7 ಜನ ಮತ್ತು ಸ್ಕಾರ್ಪಿಯೋ ವಾಹನದಲ್ಲಿ 3 ಜನ ಆ ದಿನ ಬಂದಿದ್ದರು ಎಂದು ನಾನು ದಿನಾಂಕ 24.07.2012ರ ಮರು ಹೇಳಿಕೆಯಲ್ಲಿ ತಿಳಿಸಿರುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ